# ಯುದ್ಧವೆಂಬ ವಿನಾಶ

ಜನವರಿ 2020ರ ಸಂಚಿಕೆಯಲ್ಲಿ ಪ್ರಕಟವಾದ 'ನಿಚ್ಚಂ ಪೊಸತು' ಲೇಖನಮಾಲೆ ಬಹಳ ಸಮಯೋಚಿತ, ಪ್ರಸ್ತುತ. ಹಳಗನ್ನಡದ ಸೊಗಸನ್ನು ಹೊಸ ಓದುಗರಿಗೆ ಪರಿಚಯಿಸುವುದು ಇಂದಿನ ಅಗತ್ಯ.

ಈ ಅಂಕಣದಲ್ಲಿ ಕೃಷ್ಣಮೂರ್ತಿ ಹನೂರು ಅವರು 'ಯುದ್ಧೋನ್ಮಾದ' ಕುರಿತು ವಿಶ್ಲೇಷಿಸಿರುವುದು, ಹಿಂಸೆಯ ಅನಾಹುತವನ್ನು ಹೇಳಿರುವುದು ಸರಿಯಾಗಿದೆ. ಆದರೆ ಅದರೊಂದಿಗೆ ಆ ಯುದ್ಧಗಳು ಸಮಾಜದ ಮೇಲೆ ಉಂಟುಮಾಡಿದ ಪರಿಣಾಮಗಳನ್ನು ಚರ್ಚಿಸಿದರೆ ಸೂಕ್ತವಲ್ಲವೆ? ಅದರಿಂದ ದೇಶದ ಸಂಪತ್ತು ನಾಶವಾದದ್ದು, ಅದರಲ್ಲೂ ಹೆಣ್ಣು ಗಂಡಿನ ಅನುಪಾತದ ಮೇಲೆ ಆದ ಪರಿಣಾಮ ದಾರುಣವಾಗಿದೆ.

ಯುದ್ಧವೆಂಬ ವಿನಾಶದ ಕತೆಯನ್ನು ಎಷ್ಟು ಹೇಳಿದರೂ ಕಡಿಮೆಯೇ. ಮಹಾಭಾರತದ ಯುದ್ಧ ಹದಿನೆಂಟು ದಿನಗಳು ನಡೆಯಿತಂತೆ! ಅದರಲ್ಲಿ ಅಸುನೀಗಿದ್ದು ಹದಿನೆಂಟು ಅಕ್ಷೋಹಿಣಿ ಸೈನ್ಯ! ಒಂದು ಅಕ್ಷೋಹಿಣಿಗೆ 21,870 ಆನೆಗಳು, 21,870 ರಥಗಳು (ಒಂದು ರಥದಲ್ಲಿ ಇಬ್ಬರು, ಒಬ್ಬ ಯುದ್ಧವೀರ ಮತ್ತೊಬ್ಬ ಸಾರಥಿ, ಅಂದರೆ 21,870x2=43,740), 65,610 ಕುದುರೆ ಮತ್ತು 1,09,350 ಕಾಲಾಳುಗಳು, ಒಂದು ಅಕ್ಷೋಹಿಣಿಗೆ ಒಟ್ಟು 2,84,310 ಜನ! ಆಗ ಹದಿನೆಂಟು ಅಕ್ಷೋಹಿಣಿಗೆ 2,84,310x18=51,17,580 ಜನ! ಇಷ್ಟೂ ಜನ ಹದಿನೆಂಟು ದಿನಗಳಲ್ಲಿ ಸತ್ತರು. ಸತ್ತವರೆಲ್ಲ ಪುರುಷರು! ಪುರುಷರು ಮಾತ್ರ!

ಇದು ಉತ್ಪ್ರೇಕ್ಷೆ ಎನಿಸಿದರೂ ಆ ಕಾಲದಲ್ಲಿ ಯುದ್ಧ ಮಾಡುತ್ತಿದ್ದವರು ಗಂಡಸರು ಮಾತ್ರ ಅಲ್ಲವೇ? ಒಂದು ದೇಶದ ಗಟ್ಟಿಮುಟ್ಟಾದ, ದುಡಿಯುವ ಸಾಧ್ಯತೆಯಿದ್ದ ಅಷ್ಟೂ ಜನ ಗಂಡಸರು ಏಕಕಾಲದಲ್ಲಿ ಸತ್ತುಹೋದಾಗ (ಆ ದೇಶದ ಪ್ರಗತಿ?) ಉಳಿದವರು ಬರೀ ಹೆಂಗಸರು! ಮಕ್ಕಳನ್ನು ಕಳೆದುಕೊಂಡ ತಾಯಂದಿರು, ಗಂಡಂದಿರನ್ನು ಕಳೆದುಕೊಂಡ ವಿಧವೆಯರು ಹಾಗೂ ಮದುವೆಯಾಗಬೇಕಿದ್ದ ಯುವತಿಯರು! ಸಾಯದೆ ಉಳಿದ ಪುರುಷರೆಂದರೆ ನಿಶ್ಯಕ್ತರಾದ ಮುದುಕರು, ಅಂಗವಿಕಲರು ಮತ್ತು ಯುದ್ಧಕ್ಕೆ ಹೋಗದ ಮಕ್ಕಳು! ಗಂಡು ದಿಕ್ಕಿಲ್ಲದ ಆ ಮಹಿಳೆಯರಿಗೆ ಅಳಿದುಳಿದ ಗಂಡಸರು ದಿಕ್ಕಾಗಬೇಕಾಯಿತು. ಆಗ ಗಂಡು ಮಕ್ಕಳಿಗಾಗಿ ಹಪಹಪಿಸುವುದು ಹೆಚ್ಚಾಯಿತು. ಹೆಣ್ಣೆಂದರೆ ಮೂಗು ಮುರಿಯುವುದು, ಅಸಡ್ಡೆಯಿಂದ ಕಾಣುವುದು, ಹುಟ್ಟಿದ ಮಗು ಹೆಣ್ಣಾದರೆ ಕೊಲ್ಲುವುದು ಶುರುವಾಯಿತು. ಹೆಣ್ಣೆಂದರೆ ಬಹಳ ನಿಕೃಷ್ಟವಾದ, ಸುಲಭಕ್ಕೆ ಕೈಗೆಟುಕುವ, ಹೇಗೆ ಬೇಕಾದರೂ ಬಳಸಿ ಬಿಸಾಡುವ ವಸ್ತುವಾಯಿತು. ಕುಂಟನೋ, ಕುರುಡನೋ, ಮುದುಕನೋ ಯಾರೋ ಒಬ್ಬ ಎಷ್ಟು ಬೇಕಾದರೂ ಮದುವೆಯಾಗಬಹುದಿತ್ತು; ಹೆಣ್ಣು ಜೀವ ಸಸಾರವಾಯಿತು.

ಅಷ್ಟೊತ್ತಿಗಾಗಲೆ ಹೆಣ್ಣನ್ನು ಮನೆಯೊಳಗೆ ಕೂಡಿಹಾಕುವ, ಸಂರಕ್ಷಿಸುವ, ಸ್ವಂತ ಆಸ್ತಿಯೆಂದು ಭಾವಿಸುವ ಸಮಾಜ ಸೃಷ್ಟಿಯಾಗಿದ್ದರಿಂದ ಹೊರಗಿನ ಕೆಲಸಗಳು ಅವರ ಪಾಲಿಗೆ ನಿಷಿದ್ಧವಾಗಿದ್ದವು. ಈ ಯುದ್ಧೋನ್ಮಾದ ಸೃಷ್ಟಿಸಿದ ಈ ಅಸಮತೋಲನ ಹೆಣ್ಣು ಗಂಡೆಂಬ ಭೇದಭಾವ ಬೆಳೆಸಿತು. ಪುರುಷ ಪ್ರಧಾನ ಸಮಾಜದ ಸೃಷ್ಟಿಗೆ ಮೂಲವಾಯಿತು.

ಐತಿಹಾಸಿಕವಾಗಿ ನೋಡುವಾಗ ಕೂಡ ಜಗತ್ತಿನಾದ್ಯಂತ ಇಂಥದೇ ದೃಷ್ಟಾಂತ ಕಾಣಸಿಗುತ್ತದೆ. ಎಲ್ಲಾ ಯುದ್ಧಗಳಲ್ಲೂ ಯುದ್ಧಮಾಡಿ ಸತ್ತವರು ಪುರುಷರು ಮಾತ್ರ!

● **ನಾಗಮಣಿ ಎಸ್.ಎನ್., ಬೆಂಗಳೂರು**